ದಿನಾಂಕಃ**09.09.2021** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

**<u>ಮುಂದುವರಿದ ಪಾಟೀ ಸವಾಲುಃ</u>** ಶ್ರೀ ಎಂ ಕೆ ವಿ ಕೆ 1ನೇ ಪ್ರತಿವಾದಿ ಪರ ವಕೀಲರಿಂದಃ

4. ನಮ್ಮ ಆಳಿಯ ಸಂತಾನ ಕುಟುಂಬದ ಆಸ್ತಿಗಳು ಮಾಂಟ್ರಾಡಿ , ಮರೋಡಿ, ಪೆರಾಡಿ ಮತ್ತು ಶಿರ್ತಾಡಿಗಳಲ್ಲಿ ಇವೆ. ನಮ್ಮ ಕುಟುಂಬದ ಕೊನೆಯ ಯಾಜಮಾನ ಶಾಂತಿರಾಜ ಪಾಂಡಿ ಅಂದರೆ ನಮ್ಮ ಮಾವ. ನಮ್ಮ ಮಾವ ಶಾಂತಿರಾಜ ಪಾಂಡಿ ಯಾವಾಗ ಮೃತಪಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ. ಸಾಕ್ಷಿ ಅವರು ನಾನು ಹುಟ್ಟುವ ಪೂರ್ವದಲ್ಲಿ ಮೃತಪಟ್ಟಿದ್ದಾರೆ ಎಂದು ನುಡಿಯುತ್ತಾರೆ. ಶುಭಚಂದ್ರ ಪಾಂಡಿ ಅಂದರೆ ನನ್ನ ಮಾವ , ಮೃತ ಸಿದ್ದಪ್ಪ ಪಾಂಡಿಯವರ ಮಗ. ಶುಭಚಂದ್ರ ಪಾಂಡಿಯವರ ಸಹೋದರಿಯ ಹೆಸರು ಶಾರದಾ. ಶುಭಚಂದ್ರ ಪಾಂಡಿ ಮತ್ತು ಅವರ ಸಹೋದರಿ ಶಾರದಾ ಸೇರಿ ಬೆಳ್ತಂಗಡಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ 34/2014 ರಲ್ಲಿ ಪಾಲಿನ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಅವರು ಮುಂದುವರಿಸಿಲ್ಲ. ಅವರುಗಳು ಸದರಿ ದಾವೆಯನ್ನು ಮುಂದುವರಿಸದೇ ಇದ್ದ ಕಾರಣ ಅದು ವಜಾಗೊಂಡಿದೆ ಎಂದರೆ ಸರಿಯಲ್ಲ. ಕುಟುಂಬದ ಆಸ್ತಿ ಪಾಲಾಗಬೇಕು ಎಂದು ಹೇಳಿ ನನ್ನ ಅಣ್ಣ ನೇಮಿರಾಜ ಪಾಂಡಿಯವರು ಮೂಡಬಿದ್ರೆ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ 219/20 ರಂತೆ ಪಾಲಿನ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ

ಮಾಂಟ್ರಾಡಿ , ಮರೋಡಿ , ಪೆರಾಡಿ ಆಸ್ತಿಗಳನ್ನು ಸೇರಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯ ಸಮನ್ಸ ನಮಗೆ ಜಾರಿಯಾಗಿದ್ದು , ಪ್ರತಿವಾದ ಪತ್ರವನ್ನು ನಾವು ಸಲ್ಲಿಸಿಲ್ಲ. ಕುಟುಂಬದ ಆಸ್ತಿ ಪಾಲಾಗಬೇಕು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಸದರಿ ದಾವೆಯಲ್ಲಿ ನಾನು ಮತ್ತು ಮಕ್ಕಳು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇವೆ ಮತ್ತು ಅದರಲ್ಲಿ ನಾವು ಕುಟುಂಬದ ಆಸ್ತಿ ಪಾಲಾಗಬೇಕು ಎಂದು ಕೇಳಿಲ್ಲ ಎಂದರೆ ಸರಿ. ಸಪ್ಟಂಬರ್ 9 ನೇ ತಾರೀಕಿನಂದು ನಮ್ಮ ತಂದೆ ಜಿನ್ನಪ್ಪ ಹೆಗಡೆಯವರ ಕೊಲೆಯಾಗಿದೆ ಎಂದರೆ ಸರಿ. ಸಾಕ್ಷಿ ಆದರೆ ನಾನು ಸಣ್ಣವಳಿದ್ದು , ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು 1957 ರಲ್ಲಿ ನನ್ನ ತಂದೆಯವರನ್ನು ಕೊಲೆ ಮಾಡಿದ್ದಾರೆ , ಆಗ ನಾನು ಶಾಲೆಗೆ ಹೋಗುತ್ತಿದ್ದೆ , ಕಾಪಿ ಬರೆಯುತ್ತಿದ್ದೆ ನನಗೆ ನೆನಪಿದೆ ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದಲು ಬರುತ್ತದೆ. ಸಾಕ್ಷಿಗೆ ಈ ಹಂತದಲ್ಲಿ ಮರಣ ಪ್ರಮಾಣ ಪತ್ರವನ್ನು ತೋರಿಸಲಾಗಿ , ಸಾಕ್ಷಿ ಅದರಲ್ಲಿರುವ ವಿವರಣೆ ತಪ್ಪು ವಿವರಣೆ ಮತ್ತು ನನ್ನ ತಂದೆಯವರ ಮರಣ ದಿನಾಂಕವನ್ನು ತಪ್ಪಾಗಿ ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹಾಕುವ ಪೂರ್ವದಲ್ಲಾಗಲೀ , ನಂತರದಲ್ಲಾಗಲೀ ನನ್ನ ತಂದೆಯವರ ಮರಣ ಪ್ರಮಾಣ ಪತ್ರವನ್ನು ಪಡೆಯುವುದಕ್ಕೆ ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಜನ್ಮ ದಿನಾಂಕ 09.01.1943. ನಾನು ಸಾಣೂರಿನಲ್ಲಿ ಶಾಲೆಗೆ ಹೋಗಿದ್ದೇನೆ. ಜೋಸೆಫ಼ ಪಿಂಟೋರವರು ಮುಖ್ಯೋಪಾಧ್ಯಾಯರಾಗಿದ್ದ ಶಾಲೆಗೆ ಹೋಗಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಶಿಕ್ಷಕರ ಹೆಸರು ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಣೂರಿನಲ್ಲಿ

ಸೈಂಟ್ ಜೋಸೆಫ್ ಶಾಲೆಗೆ ಹೋಗಿದ್ದೆ. ಸಾಕ್ಷಿ ನಾನು ಅಲ್ಲಿ ಎರಡು ವರ್ಷ ವಿದ್ಯಾಭ್ಯಾಸ ಮಾಡಿದ್ದೆ ಎಂದು ನುಡಿಯುತ್ತಾರೆ. ನಾನು ಶಾಲೆಗೆ ಹೋಗುತ್ತಿದ್ದಾಗ ಸದರಿ ಶಾಲೆಯಲ್ಲಿ ಯಾರು ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ನನಗೆ ನೆನಪಿಲ್ಲ. ನಾನು ಯಾವ ವರ್ಷದಲ್ಲಿ ಶಾಲೆಗೆ ದಾಖಲಾಗಿದ್ದೆ ಎಂದು ನನಗೆ ನೆನಪಿಲ್ಲ. ಯಾವ ವರ್ಷದಲ್ಲಿ ನಾನು ನನ್ನ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿದ್ದೆ ಎಂದು ನನಗೆ ನೆನಪಿಲ್ಲ. ನನ್ನ ತಂದೆಯ ಆಳಿಯ ಆದಿರಾಜ ಹೆಗಡೆ ಮತ್ತು ಇನ್ನೋರ್ವ ಹರಿಜನ ವ್ಯಕ್ತಿಯ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದ್ದು , ಸದರಿ ಪ್ರಕರಣದಲ್ಲಿ ಅವರಿಗೆ ಶಿಕ್ಷೆಯಾಗಿದೆ. ಆದಿರಾಜ ಹೆಗಡೆಯವರು ನಂತರ ಜೈಲಿನಲ್ಲಿ ಮೃತಪಟ್ಟಿರುತ್ತಾರೆ. ಆ ಸಮಯದಲ್ಲಿ ಸಾಣೂರಿನ ಚಿಕ್ಕಬೆಟ್ಟು ಮನೆಯಲ್ಲಿ ನನ್ನ ತಾಯಿ , ನನ್ನ ಅಕ್ಕ ಮತ್ತು ನನ್ನ ತಾಯಿಯ ಇತರ ಮಕ್ಕಳು ಮಾತ್ರ ವಾಸವಾಗಿದ್ದೆವು ಎಂದರೆ ಸರಿ. ನನ್ನ ತಂದೆ ಮೃತಪಡುವ ಸಮಯದಲ್ಲಿ ನನ್ನ ಅಣ್ಣ 1ನೇ ಪ್ರತಿವಾದಿ ಕೂಡಾ ಶಾಲೆಗೆ ಹೋಗುತ್ತಿದ್ದರು. ನನ್ನ ತಂದೆತಾಯಿಯ ಮಕ್ಕಳ ಪೈಕಿ ಲಕ್ಷ್ಮೀಯವರಿಗೆ ಪ್ರಥಮವಾಗಿ ಮದುವೆಯಾಗಿದೆ. ಅವರಿಗೆ ಯಾವ ವರ್ಷದಲ್ಲಿ ಮದುವೆಯಾಗಿದೆ ಎಂದು ನನಗೆ ನೆನಪಿಲ್ಲ. ಅವರಿಗೆ ಮದುವೆಯಾಗುವಾಗ ನನಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ನೆನಪಿಲ್ಲ. ಸುಮನಾಜಿ ನನ್ನ ಅಕ್ಕ. ಅವರಿಗೆ ಯಾವ ವರ್ಷದಲ್ಲಿ ಮದುವೆಯಾಗಿದೆ ಎಂದು ನನಗೆ ನೆನಪಿಲ್ಲ. ಸುಮನಾಜಿಯವರಿಗೆ ಮದುವೆಯ ಕಾಲಕ್ಕೆ 1ನೇ ಪ್ರತಿವಾದಿ ವಕಾಲತ್ತು ವೃತ್ತಿಯನ್ನು ಮಾಡುತ್ತಿದ್ದರು ಎಂದರೆ ನನಗೆ ನೆನಪಿಲ್ಲ. ನನ್ನ ಮದುವೆಯ ಕಾಲಕ್ಕೆ 1ನೇ ಪ್ರತಿವಾದಿಯವರು ಕಾರ್ಕಳ

ನ್ಯಾಯಾಲಯದಲ್ಲಿ ವಕಾಲತ್ತು ವೃತ್ತಿಯನ್ನು ನಡೆಸುತ್ತಿದ್ದರು. ಶ್ರೀಧರ ಪಾಂಡಿ ಮತ್ತು ನನ್ನ ನಡುವೆ 15 ವರ್ಷ ವಯಸ್ಸಿನ ಅಂತರ ಇದೆ. 2 ನೇ ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಅಂದಾಜು 10 ವರ್ಷಗಳ ವಯಸ್ಸಿನ ಅಂತರ ಇದೆ. 1 ನೇ ಪ್ರತಿವಾದಿಗೆ ಮದುವೆಯಾಗುವ ಕಾಲಕ್ಕೆ 44 ವರ್ಷ ವಯಸ್ಸಾಗಿದ್ದು , 1989 ರಲ್ಲಿ ಅವರಿಗೆ ಮದುವೆಯಾಗಿದೆ ಎಂದರೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿಯ ಸಹೋದರಿಯರಿಗೆ ಮದುವೆಯಾಗದೇ ಇದ್ದ ಕಾರಣ ಅವರ 44 ವಯಸ್ಸಿನವರೆಗೆ ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಭೂ ಮಸೂದೆ ಕಾನೂನು ಜಾರಿಗೆ ಬಂದ ನಂತರ ದಾವಾ ಆಸ್ತಿಯ ಬಾಬ್ತು ನಾವುಗಳು ಒಕ್ಕಲುಗಳು ಎಂದು ಹೇಳಿಕೊಂಡು ಭೂ ನ್ಯಾಯ ಮಂಡಳಿಯಲ್ಲಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳು ಇದ್ದವು ಎಂದರೆ ಸಾಕ್ಷಿ ಹಿಂದೆ ಇದ್ದವು , ಈಗ ಇಲ್ಲ ಎಂದು ನುಡಿಯುತ್ತಾರೆ. ಸಾಣೂರಿನ ನಮ್ಮ ಆಸ್ತಿಯಲ್ಲಿ ಸೇಸು ಪೂಜಾರ್ತಿ ಎನ್ನುವ ಒಕ್ಕಲು ಇರಲಿಲ್ಲ. ಎಚ್ ಓ ಬಿ ಯಾನೆ ಸೀನೋಜಿ ರಾವ್ ಎಂಬ ಒಕ್ಕಲುಗಳು ದಾವಾ ಆಸ್ತಿಯಲ್ಲಿ ಇದ್ದರು. ಅಕ್ಕು ಮ್ಯೊಲ್ತಿ ಮತ್ತು ಐತು ಮ್ಯೊಲಿ ಸಾಣೂರಿನ ಚಿಕ್ಕಬೆಟ್ಟುವಿನ ಒಕ್ಕಲುಗಳು. ಸಾಣೂರು ಗ್ರಾಮದಲ್ಲಿ ಒಟ್ಟು ಮೂರು ಒಕ್ಕಲುಗಳು ಇದ್ದರು. ಬೈಲುಗದ್ದೆಗಳು ಮೂರು ಒಕ್ಕಲುಗಳ ಸ್ವಾಧೀನದಲ್ಲಿದ್ದವು. ಅವರೆಂದರೆ ಎಚ್ ಓ ಬಿ ರಾವ್ , ಶಿವಯ್ಯ , ಐತ್ತು ಮ್ಯೊಲಿ. ಒಕ್ಕಲುಗಳಿಂದ ಬೈಲುಗದ್ದೆಗಳನ್ನು ನಾವು ಬಿಡಿಸಿಕೊಂಡಿದ್ದೇವೆ. ಒಕ್ಕಲುಗಳಿಂದ ಬಿಡಿಸಿಕೊಂಡಿರುವ ಬೈಲುಗದ್ದೆಗಳು ಯಾವುವು ಎಂಬ ಬಗ್ಗೆ ವಿವರಗಳು ನನಗೆ ಗೊತ್ತಿಲ್ಲ. ಒಕ್ಕಲುಗಳಿಂದ ಬೈಲುಗದ್ದೆಗಳನ್ನು ಯಾವಾಗ

ಬಿಡಿಸಿಕೊಂಡಿದ್ದೇವೆ ಎನ್ನುವ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ , ದಾಖಲೆಗಳನ್ನು ನಾನು ನೋಡಿಲ್ಲ , ಆದರೆ ಸದರಿ ಬೈಲುಗದ್ದೆಗಳ ಮೇಲೆ ಯಾವುದೇ ಪ್ರಕರಣಗಳು ಇಲ್ಲ ಎಂದು ನುಡಿಯುತ್ತಾರೆ.

5. ಚಂದು ಶೆಟ್ಟಿ ಮತ್ತು ಶಿವಪ್ಪ ಶೆಟ್ಟಿಯವರು ಇರ್ವತ್ತೂರು ಗ್ರಾಮದ ಆಸ್ತಿಯ ಒಕ್ಕಲುಗಳಾಗಿದ್ದರು. ಬೆಳುವಾಯಿಯಲ್ಲಿ ನಮಗೆ ಸೇರಿದ ಆಸ್ತಿಯಿದ್ದು , ಅದನ್ನು ಕ್ರಯವರಿಸಿದವರ ಸ್ವಾಧೀನದಲ್ಲಿದೆ. ಅಚ್ಚುತ ಎನ್ನುವವರು ಅದನ್ನು ಕ್ರಯವರಿಸಿಕೊಂಡಿದ್ದಾರೆ. ಸಾಕ್ಷಿಯು ಮುಂದುವರಿದು ನಮ್ಮ ಗಮನಕ್ಕೆ ತಾರದೇ ಅದನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಬೆಳುವಾಯಿಯ ಆಸ್ತಿ ಇರುವ ಪ್ರದೇಶವನ್ನು ಯಡ್ತೂರು ಎಂದು ತುಳುವಿನಲ್ಲಿ ಮತ್ತು ಇರ್ವತ್ತೂರು ಎಂದು ಕನ್ನಡದಲ್ಲಿ ಕರೆಯುತ್ತಾರೆ. ಶ್ರೀಧರ ಪಾಂಡಿಯವರು ಮುಕ್ತ್ಯಾರುನಾಮೆಯನ್ನು ಹೊಂದಿ 1ನೇ ಪ್ರತಿವಾದಿಯ ಮತ್ತು ಅವರ ಭಾಗದ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದು ಗೊತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ವಕೀಲರು ಅದನ್ನು ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಶ್ರೀಧರ ಪಾಂಡಿಯವರು ಮುಕ್ತ್ಯಾರುನಾಮೆಯನ್ನು ಪಡೆದುಕೊಂಡು ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎನ್ನುವ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. ಶ್ರೀಧರ ಪಾಂಡಿಯವರು ಸುಮಾರು 7-8 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಶ್ರೀಧರ ಪಾಂಡಿಯವರ ಹೆಂಡತಿ ಮಕ್ಕಳೊಂದಿಗೆ ನೀವು ಅನ್ಯೋನ್ಯತೆಯಿಂದ ಒಳ್ಳೆಯ ಸಂಬಂಧವನ್ನು ಹೊಂದಿದ್ದಿರೋ ಎಂಬ ಪ್ರಶ್ನೆಗೆ

ಸಾಕ್ಷಿಯು ನಾವು ಒಮ್ಮೊಮ್ಮೆ ಹೋಗಿ ಬಂದು ಮಾಡುತ್ತೇವೆ ಎಂದು ನುಡಿಯುತ್ತಾರೆ. ಇರ್ವತ್ತೂರು ಆಸ್ತಿಯನ್ನು ಐದು ಒಕ್ಕಲು ಮನೆ ಎಂದು ಕರೆಯುತ್ತಾರೆ. ಐದು ಒಕ್ಕಲು ಮನೆಯ ಚಾವಡಿಯಲ್ಲಿ ರಕ್ತೇಶ್ವರಿ , ಜುಮಾದಿ , ಪರಿವಾರ ದೈವಗಳು ಮತ್ತು ನಾಗಬನ ಇದೆ. ಸಾಣೂರು ಚಿಕ್ಕಬೆಟ್ಟು ಮನೆಯಲ್ಲಿ ಪಂಜುರ್ಲಿ , ಕಲ್ಲುರ್ಟಿ ಮತ್ತು ಪರಿವಾರ ದೈವಗಳು , ನಾಗಬನ ಇದೆ.

(ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದಾರೆ. ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.